# ಆಹಾ ಸುದ್ದಿ!

★ ಸಸಿತೋಟ



ಒರೆಗಾನ್‌ನ ಈ ಯೋಗ ತರಬೇತುದಾರಳಾದ ಲೈನಿ ಮೇಕೆ ಯೋಗ ತರಬೇತಿ ಶುರು ಮಾಡುತ್ತಾಳಂತೆ. ಬೆನ್ನಿನ ಮೇಲೆ ಮರಿ ಮೇಕೆ ಕೂಡ್ರಿಸಿಕೊಂಡು ಆಸನ ಹಾಕುವ ಈಕೆಯ ಯೋಗದಿಂದ ಮೇಕೆಯ ಆರೋಗ್ಯವೇನೂ ಅಷ್ಟು ಸುಧಾರಿಸಲಿಕ್ಕಿಲ್ಲ ಬಿಡಿ.

ನ್ಯೂಜಿಲೆಂಡ್‌ನ ಕೈತಾಂಗತಾ ಎಂಬ ಪಟ್ಟಣದಲ್ಲಿ ಹೊಸ ನಿವಾಸಿಗಳಿಗಾಗಿ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆಯಂತೆ. ಅಲ್ಲಿ ಉದ್ಯೋಗ, ಮನೆಗಳಿಗೆ ಬರ ಇಲ್ಲವಂತೆ. ಆದರೆ ಜನರ ಕೊರತೆಯಂತೆ. ಈಗಿರುವ 800 ಮಂದಿಗೆ ಹೊಸ ಮುಖ ನೋಡದೇ ಬೇಸರವಾಗಿದೆಯಂತೆ. ಮನೆಗಳಿಗಂತೂ ಬೀಗ ಹಾಕುವುದೇ ಇಲ್ಲವಂತೆ. ಬೀಗ ಮುರಿಯುವ ಕಷ್ಟವೇ ಇಲ್ಲ ಎನ್ನುವವರು ವೀಸಾ ಪಡೆಯಲು ಓಡಬಹುದು!



ಇದು ಸೆಲೆಬ್ರಿಟಿಗಳನ್ನು ಛಾಯಾಚಿತ್ರಗ್ರಾಹಕರಿಂದ ಮರೆಮಾಚುವ ಜಾದೂ ಸ್ಕಾರ್ಫ್. ಡಚ್ ಉಡುಪು ವಿನ್ಯಾಸಗಾರನೊಬ್ಬ ಕಂಡುಹಿಡಿದಿದ್ದು, ಇದನ್ನು ಧರಿಸಿದರೆ ಸ್ಕಾರ್ಫ್‌ನಿಂದ ಹೊರಹೊಮ್ಮುವ ಬೆಳಕು ಕ್ಯಾಮೆರಾ ಲೆನ್ಸ್ ಮೇಲೆ ಪ್ರತಿಫಲಿಸಿ ಮುಖವನ್ನು ಮರೆ ಮಾಡುತ್ತದಂತೆ. ಕ್ಯಾಮೆರಾ ಕಂಡೊಡನೆ ಸಾಕು, ಹಲ್ಲಿನ ಬಿಳುಪನ್ನು ಹೊರಹೊಮ್ಮಿಸುವ ಸೆಲೆಬ್ರಿಟಿಗಳು ಮುಖ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಸೃಷ್ಟಿಸಿದ್ದು ಯಾರೋ!



ಇಂಡೋನೇಷ್ಯಾದ 10 ವರ್ಷ ವಯಸ್ಸಿನ ಬಾಲಕ ಆರ್ಯ 192 ಕೆಜಿ ತೂಗುತ್ತಿದ್ದು, ವಿಶ್ವದ ದಢೂತಿ ಬಾಲಕನಂತೆ. ಸದ್ಯ ನಡೆದಾಡಲು, ಉಸಿರಾಡಲು ಕಷ್ಟಪಡುವ ಈತನಿಗೆ ವೈದ್ಯರು ಯಾವುದೇ ಆರೋಗ್ಯದ ಸಮಸ್ಯೆ ಇಲ್ಲ ಎಂದು ಸರ್ಟಿಫಿಕೇಟ್ ಕೊಟ್ಟಿದ್ದು, ಅವರಮ್ಮನಿಗೆ ಗೊಂದಲ ಮೂಡಿಸಿದೆಯಂತೆ. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಲು ವೈದ್ಯರಿಗೆ ಇನ್ನೆಷ್ಟು ಸಮಯ ಹಿಡಿಯುತ್ತದೋ!



ಮಾಂಟ್ರಿಯಲ್‌ನ ಟೊರಿನೊ ತನ್ನ ಮದುವೆ ಸಂಭ್ರಮದ ಮಧ್ಯೆ 9 ತಿಂಗಳ ತನ್ನ ಮಗುವಿಗೆ ಸ್ತನಪಾನ ಮಾಡಿಸುತ್ತಿರುವ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಬಹಳಷ್ಟು ಲೈಕ್‌ಗಳನ್ನು ಪಡೆದಿದೆಯಂತೆ. ಮದುವೆಯ ಉದ್ದೇಶವೇ ಪೂರೈಸಿದ ಮೇಲೆ ಮದುವೆಯ ಶಾಸ್ತ್ರಗಳು ಮುಖ್ಯವಲ್ಲ ಎಂಬ ಸಂದೇಶ ನೀಡಲು ಈಕೆ ಹೊರಟಿರಬಹುದು.

ಅಮೆರಿಕದಲ್ಲೊಬ್ಬ ಗುರೂಜಿ ಹುಟ್ಟಿಕೊಂಡಿದ್ದಾನಂತೆ. ಟೋನಿ ರಾಬಿನ್ಸ್ ಎಂಬಾತ ಕೆಂಡದ ಮೇಲೆ ನಡೆದು ಒಳಗಿರುವ ಶಕ್ತಿ ಹೊರತರುವಂತೆ ಹೇಳಿದ್ದೇ ತಡ, 30–40 ಮಂದಿ ಅದರ ಮೇಲೆ ನಡೆದುಕೊಂಡು ಹೋಗಿ ಕಾಲು ಸುಟ್ಟುಕೊಂಡು ಆಸ್ಪತ್ರೆ ಸೇರಿದ್ದಾರಂತೆ. ಭಾರತದ ಗಾಳಿ ಅಲ್ಲಿಯೂ ಚೆನ್ನಾಗೇ ಬೀಸುತ್ತಿದೆ.